ಬಂದವನಂತೆ ಮಾವಿನ ಸಸಿಗಳಿಗೆ ಪಾತಿ ಮಾಡುತ್ತಿದ್ದನು. ಮಲ್ಲಣ್ಣನ ಮಾತುಗಳು ಅವನ ಕಿವಿಯಲ್ಲಿ ಗುಯ್ ಗುಡುತ್ತಿದ್ದವು. ಅದು ಹೆಚ್ಚಾದಂತೆಲ್ಲಾ ಚಂದ್ರುವಿನ ರಟ್ಟೆ ಮತ್ತಷ್ಟು ಗಟ್ಟಿಯಾಗಿ ಪಿಕಾಸಿ ಭೂಮಿಯ ಆಳಕ್ಕಿಳಿಯುತ್ತಿತ್ತು.

ನಶೆ ಇಳಿದಿತ್ತೇನೋ ಮಲ್ಲಣ್ಣ ಆ ಕಡೆಯಿಂದ ಈ ಕಡಿಕೆ ಈ ಕಡೆಯಿಂದ ಆ ಕಡಿಕೆ ಹೊರಳಾಡುತ್ತಿದ್ದ. ಇದ್ದಕ್ಕಿದ್ದಂತೆ ದಗ್ಗನೆ ಎದ್ದು ನೀಲವ್ವನ ಕಡೆ ನೋಡಿದ. ಜೊಲ್ಲು ಸೋರಿ ಕೋಡಿಯಾಗಿತ್ತು. ಅಲ್ಲೇ ಕೆಳಗೆ ಚೆಲ್ಲಾಡುತ್ತಿದ್ದ ಲುಂಗಿಯಿಂದ ಬಾಯಿ ಒರೆಸಿ ನೀರು ಕುಡಿಸಿ ತಲೆಗೆ ಇನ್ನೊಂದು ದಿಂಬಿಟ್ಟು ಚಂದ್ರುವಿಗಾಗಿ ಹುಡುಕಾಡಿದ. ಅವನು ತೋಟದಲ್ಲಿರುವುದು ತಿಳಿದು ಅಲ್ಲಿಗೆ ಹೊರಟ. ಚಂದ್ರು ಮಾವಿನ ಸಸಿಯೊಂದರ ಕೆಳಗೆ ಅಂಗಾತ ಬಿದ್ದುಕೊಂಡಿದ್ದನ್ನು ಕಂಡು 'ಈ ಮಟಮಟ ಮದ್ಯಾಂದಲ್ಲಿ ಅದ್ಯಾಕಿಂಗೆ ಮನಿಕಂಡಿದ್ದಿ ಮಗ ಎದ್ದೇಳಪ್ಪ' ಎಂದು ಎಬ್ಬಿಸಲು, ಚಂದ್ರು 'ಆ ಬಡ್ಡೆತ್ತವಕ್ಕೆ ಏನ್ ಮಾಡನ ಹೇಳು' ಎಂದ. ಮಲ್ಲಣ್ಣ 'ಯಾರಿಗೆ ಮಗ' ಎಂದೊಡನೆ ಚಂದ್ರುವಿನ ಕಣ್ಣು ಕೆಂಪಗಾಯಿತು. 'ಕುಡ್ದಾಗ ಮಾತ್ರ ನಿಂಗೆ ಗಂಡುಸ್ತನ ನಿಗಿರಿ ನಿಂತ್ಕಬುಡ್ತದೆ ಅಲ್ವಾ. ಥೂ ಬೇವರ್ಸಿ ಜನ್ಮ' ಎಂದೊಡನೆ ಮಲ್ಲಣ್ಣ ಮಾತು ಮರೆಸಲು 'ನಿಮ್ಮವ್ವನ್ನ ಆಸ್ಪತ್ರೆಗೆ ಯಾವಾಗ ಕರ್ಕ ಹೋಗ್ಬೇಕ್ಲಾ ಮಗ' ಎಂದ. ಚಂದ್ರುವಿನ ಮುಖ ಭಾವ ಬದಲಾಗಲಿಲ್ಲ. ಬಿಟ್ಟ

